ಓ.ಎಸ್.ನಂ.376/2016

ಡಿ.ಡಬ್ಲ್ಯು:1

**ದಿನಾಂಕಃ30.10.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃವಾದಿ ಪರ ಶ್ರೀ.ಎ.ಎಂ.ಆರ್.ವಕೀಲರಿಂದಃ**

ಈ ದಾವೆಯ ವಾದ-ಪ್ರತಿವಾದಪತ್ರದ ಎಲ್ಲಾ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣಪತ್ರದ ಎಲ್ಲಾ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ನಾನು ಎಸ್.ಎಸ್.ಎಲ್.ಸಿ.ವರೆಗು ವಿದ್ಯಾಭ್ಯಾಸ ಮಾಡಿರುತ್ತೇನೆ.ನನಗೆ ಕನ್ನಡ ಚನ್ನಾಗಿ ಓದಲು-ಬರೆಯಲು ಬರುತ್ತದೆ. ನನ್ನ ಪ್ರತಿವಾದಪತ್ರದಲ್ಲಿ ಬರೆದಿರುವ ಆಸ್ತಿಯನ್ನು ನಾನು 2016 ನೇ ಸಾಲಿನಲ್ಲಿ ಖರೀದಿ ಮಾಡಿರುತ್ತೇನೆ. ನಾನು ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು 4 ನೇ ಪ್ರತಿವಾದಿಯಿಂದ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. 4 ನೇ ಪ್ರತಿವಾದಿ 5 ನೇ ಪ್ರತಿವಾದಿಯಿಂದ ಆಸ್ತಿಯನ್ನು ದಿಃ10.09.1979 ರಂದು ಖರೀದಿ ಮಾಡಿದ್ದರು. ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಾನೇ ಹಾಜರುಪಡಿಸಿರುವ ದಿಃ10.09.1979 ರ ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಿ, ಸದರಿ ಕ್ರಯಪತ್ರದ ಮುಖಾಂತರವೇ

4 ನೇಪ್ರತಿವಾದಿ 5 ನೇ ಪ್ರತಿವಾದಿಯಿಂದ ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ತೋರಿಸಿ ಕೇಳಲಾಗಿ, ಸಾಕ್ಷಿ ನೋಡಿ ಗುರುತಿಸಿ ಹೌದು ಎಂದು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ಡಿ.ಡಬ್ಲ್ಯು.1 ರವರು ಹಾಜರುಪಡಿಸಿರುವ ಕಾರಣ ಅದನ್ನು ನಿಡಿ-12 ಎಂದು ಗುರುತಿಸಲಾಯಿತು. ನಿಡಿ-12 ರಲ್ಲಿ ನಮೂದಿಸಿರುವ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ:ಸಣ್ಣತಿಮ್ಮಯ್ಯ ರವರ ಆಸ್ತಿ, ಪಶ್ಚಿಮಕ್ಕೆ:ಕೆ.ಎಂ.ರಸ್ತೆ, ಉತ್ತರಕ್ಕೆ:ಕಾಶಿ ವಿಶ್ವನಾಥರವರ ಆಸ್ತಿ ಮತ್ತು ದಕ್ಷಿಣಕ್ಕೆ:ಜೆ.ಡಿ.ಚಾವ್ಡ ಅವರ ಆಸ್ತಿ ಎಂದು ನಮೂದು ಇದೆ ಅಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ಚಕ್ಕುಬಂದಿ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ.

ನಾನು ಕಳೆದ 40 ವರ್ಷಗಳಿಂದಲೂ ಕಡೂರಿನಲ್ಲಿ ವಾಸವಾಗಿದ್ದೇನೆ. ನಾನು ಕಡೂರಿನಿಂದ ಚಿಕ್ಕಮಗಳೂರಿಗೆ ಹಲವಾರು ಬಾರಿ ಓಡಾಡಿದ್ದೇನೆ ಅಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ನನ್ನ ಆಸ್ತಿ ಇರುತ್ತದೆ. ನಾನು ಖರೀದಿಸಿರುವ ಆಸ್ತಿಯ ಚಕ್ಕುಬಂದಿ:ಪೂರ್ವಕ್ಕೆ:1 ನೇ ವಾದಿ ಮಂಗಳ ರವರ ಆಸ್ತಿ, ಪಶ್ಚಿಮಕ್ಕೆ:ಶೋಭ ಗೌತಮ್ ರವರ ಆಸ್ತಿ, ಉತ್ತರಕ್ಕೆ:ಕೆ.ಎಂ.ರಸ್ತೆ ಮತ್ತು ದಕ್ಷಿಣಕ್ಕೆ: ಬೀರಪ್ಪ ರವರ ಆಸ್ತಿ ಇರುತ್ತದೆ. ನಾನು ಒಂದು ಕೋಟಿ ಇಪ್ಪತ್ತೈದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ನನ್ನ ಪ್ರತಿವಾದ ಪತ್ರದ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. 4 ನೇ ಪ್ರತಿವಾದಿಗೆ ನಾನು ಖರೀದಿಸುವ ಆಸ್ತಿಯ ಆವತ್ತಿನ ದಾಖಲೆಗಳನ್ನು ನೋಡಿ ಹಣ ಪಾವತಿ ಮಾಡಿರುತ್ತೇನೆ. ನನ್ನ ಕ್ರಯಪತ್ರದಲ್ಲಿ ನಮೂದಿಸಿರುವಂತೆ ಸರ್ವೇನಂ.198/3 ರಲ್ಲಿ 1 ಎಕರೆ 36 ಗುಂಟೆ ಜಮೀನು ಭೂ ಪರಿವರ್ತನೆ ಆಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಭೂಪರಿವರ್ತನೆಯಾದಾಗ 5 ನೇ ಪ್ರತಿವಾದಿ ನಿವೇಶನವನ್ನು ವಿಂಗಡಣೆ ಮಾಡಿದ್ದರು. ಸದರಿ ಆಸ್ತಿ ಭೂಪರಿವರ್ತನೆಯಾದ ನಂತರ ನಕ್ಷೆಯನ್ನು ನೋಡಿ ನೀವು ಕ್ರಯಪತ್ರ ಮಾಡಿಕೊಂಡಿದ್ದೀರಾ? ಅಂದರೆ, ಸಾಕ್ಷಿ ನಾನು ನಕ್ಷೆಯನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

1 ನೇ ವಾದಿ ಗಂಡ ಟಿ.ವಿ.ಮಂಜುನಾಥ್ ಮತ್ತು ಅವರ ಸಹೋದರ ಟಿ.ವಿ.ಕಾಶೀನಾಥ್ ರವರು ನನಗೆ ಪರಿಚಿತರು. ವಾದಿಯ ಅತ್ತಿಗೆ ಯಶೋದಮ್ಮ ರವರು

ಮತ್ತು ವಾದಿಯ ಭಾವ ಟಿ.ವಿ.ಕಾಶೀನಾಥ್ ರವರು ಸಹ 5ನೇ ಪ್ರತಿವಾದಿ ಜಿ.ಡಿ.ಚಾವ್ಡರವರಿಂದ ನಿವೇಶನವನ್ನು ಖರೀದಿ ಮಾಡಿರುತ್ತಾರೆ. ಅವರ ನಿವೇಶನಗಳು ಮತ್ತು ನಮ್ಮ ನಿವೇಶನ ಎಲ್ಲವೂ ಒಂದೇ ಬೌಂಡರಿಯಲ್ಲಿ ಬರುತ್ತವೆ ಅಂದರೆ ಸರಿ. ಚಿಕ್ಕಮಗಳೂರಿನಿಂದ ಕಡೂರಿಗೆ ಹೋಗುವ ರಸ್ತೆ ಸುಮಾರು 50-60 ವರ್ಷಗಳಿಂದ ಇದೆ ಅಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣಪತ್ರದ 7ನೇ ಪ್ಯಾರದಲ್ಲಿ ಹೇಳಿರುವಂತೆ ಸರ್ವೇನಂಬರ್.198/3 ರಲ್ಲಿ 1 ಎಕರೆ 36 ಗುಂಟೆ ನಿಂಗಮ್ಮ ಕೋಂ ಹೊನ್ನಪ್ಪ ರವರಿಗೆ ಸೇರಿದ್ದು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ದಿಃ24.06.1942 ರಂದು ಸದರಿ ನಿಂಗಮ್ಮ ಸಣ್ಣ ಯಂಕಟಪ್ಪ ಬಿನ್ ದೊಡ್ಡ ಯಂಕಟಪ್ಪರವರಿಗೆ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.